**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮಾನವಿ.**

**C.C. No. 265/2018**

CW-14
PW-2

ಸಾಕ್ಷಿದಾರರ ಹೆಸರು : ಶಾಂತಮ್ಮ

ಗಂಡನ ಹೆಸರು : ಶಂಕರಬಾಬು

ವಯಸ್ಸು : 45 ವರ್ಷ

ಉದ್ಯೋಗ : ಸ್ಟಾಫ್ ನರ್ಸ್

ವಾಸ ಸ್ಥಳ : ರಾಯಚೂರು

ದಿನಾಂಕ 05.02.2024 ರಂದು ಸತ್ಯ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

2003 ರಿಂದ 2015 ರವರೆಗೆ ನಾನು ಪೋತ್ನಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸ್ಟಾಫ್ ನರ್ಸ್ ಎಂದು ಕೆಲಸ ಮಾಡಿದ್ದೆನೆ. ನನಗೆ ಚಾಸಾ-15 ರಿಂದ 18 ಗೋತು. ದಿಃ 04-12-2015 ರಂದು ನಾನು ಬೆ.11.00 ರಿಂದ ಮ.3.00 ರವರೆಗೆ ಪೋತ್ನಾಳ ಪ್ರಾಥಮಿಕ ಆರೋಗ್ಯ ಕೇಂದ್ರದ ಕರ್ತವ್ಯದಲ್ಲಿ ಇದ್ದೆನು. ಹಾಸ್ಟೇಲ್ ನಲ್ಲಿ ವಿರೇಶ ಎಂಬ ವಿದ್ಯಾರ್ಥಿಗೆ ವಿದ್ಯುತ ಸ್ಪರ್ಶ ದಿಂದ ಗಾಯಗೊಂಡಿದ್ದರಿಂದ ಚಿಕಿತ್ಸೆಗೆ ಕರೆದುಕೊಂಡು ಬಂದಿದ್ದರು. ನಾನು ಸದರಿ ಹುಡುಗನಿಗೆ ಪರೀಕ್ಷಿಸಿದಾಗ ಮೃತಪಟ್ಟಿದ್ದ. ನಂತರ ನಾನು 108 ಅಂಬುಲೆನ್ಸಗೆ ಕರೆ ಮಾಡಿ ತಿಳಿಸಿರುತ್ತೇನೆ. ಮಗು ಮೃತಪಟ್ಟಿರುವುದರಿಂದ 108 ಅಂಬುಲೆನ್ಸ ರವರು ತೆಗೆದುಕೊಂಡು ಹೋಗುವುದಿಲ್ಲ ಎಂದು ಹೇಳಿದರು. ಮೃತ ವಿದ್ಯಾರ್ಥಿಯೊಂದಿಗೆ ಬಂದ ವಿದ್ಯಾರ್ಥಿಗಳು ಆಸ್ಪತ್ರೆಯ ಕಿಡಕಿ ಮತ್ತು ಬಾಗಿಲುಗಳನ್ನು ಮುರಿದು ಬೆಂಕಿ ಹಚ್ಚಿರುತ್ತಾರೆ. ಪ್ರಕರಣದ ಮುಂದಿನ ವಿಷಯ ನನಗೆ ಗೋತ್ತಿಲ್ಲ. ಪೋಲಿಸರಿಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಗಣಿಸಬೇಕೆಂದು ಕೋರಿರುತ್ತಾರೆ. ಅಂತೆಯೇ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

1. ಆ ದಿನ ಅಲ್ಲಿ ನೆರೆದಿದ್ದ ಸಾರ್ವಜನಿಕರಿಗೆ ಪೋಲಿಸರು ಶಾಂತತೆ ಕಾಪಾಡುವಂತೆ ಕೇಳಿದಾಗ, ಕೇಳದೆ ಪೋಲಿಸರ ಮೇಲೆ ಕಲ್ಲು ಎಸೆದಿರುತ್ತಾರೆ ಅಂದರೆ ಸರಿ. ಪೋಲಿಸರು ಪಿಸ್ತೂಲಿನಿಂದ ಗಾಳಿಯಲ್ಲಿ ಗುಂಡು ಹಾರಿಸಿರುತ್ತಾರೆ, ಆಶ್ರುವಾಹಿ ಸಿಂಪಡಿಸಿರುತ್ತಾರೆ ಅಂದರೆ ಸರಿ. ಚಾಸ-1 ಮತ್ತು ೨ ರಿಗೆ ಕಲ್ಲು ಎಸೆದು ಗಾಯಗಳು ಆಗಿದ್ದವು ಅಂದರೆ ಸರಿ. ಆ ದಿನ ಗಲಾಟೆಯಲ್ಲಿ ಭಾಗವಹಿಸಿದ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಅಂದರೆ ಸರಿಯಲ್ಲ. ಆ ಬಗ್ಗೆ ದಿಃ 05-12-2015 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಹೇಳಿಕೆ ನಿಪಿ.2 ಎಂದು ಗುರುತಿಸಲಾಯಿತು. ನಾನು ನಿಪಿ.2 ರಂತೆ ಹೇಳಿಕೆ ನೀಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ** ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

**ಪ್ರ.ದ.ನ್ಯಾದಂ.ಗಳು, ಮಾನ್ವಿ**